# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೫<br>Part – V | ಬೆಂಗಳೂರು, ಮಂಗಳವಾರ, ೧೨, ಮಾರ್ಚ್, ೨೦೨೪ (ಫಾಲ್ಗುಣ, ೨೨, ಶಕವರ್ಷ, ೧೯೪೫)<br>BENGALURU, TUESDAY, 12, MARCH, 2024(PHALGUNA, 22, SHAKAVARSHA, 1945) | ನಂ. ೧೭೯<br>No.179 |
|---|---|---|


## ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ: ಕವಿಪ:ಆ–1:179:ನೇನೇ:2023

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನಸೌಧ,
ಬೆಂಗಳೂರು–560 001, ದಿನಾಂಕ:12.03.2024

### ಅಧಿಸೂಚನೆ

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದ ಮತ್ತು ಕಲ್ಯಾಣ-ಕರ್ನಾಟಕ ವೃಂದದಲ್ಲಿನ ವಿವಿಧ ವೃಂದಗಳ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡುವ ಬಗ್ಗೆ.

******

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಅಧಿಕಾರಿಗಳು ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021ರ ರೀತ್ಯಾ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಈ ಕೆಳಕಂಡ ವಿವಿಧ ವೃಂದಗಳ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಈ ಕೆಳಕಂಡ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಲಿಂಕ್ ಮೂಲಕ ಸಲ್ಲಿಸತಕ್ಕದ್ದು.

http://kea.kar.nic.in ಅಥವಾ https://cetonline.karnataka.gov.in/kea

**ಹುದ್ದೆಗಳ ವರ್ಗೀಕರಣದ ವಿವರ:**

1. ಹುದ್ದೆಯ ಹೆಸರು: **ಸೀನಿಯರ್ ಪ್ರೋಗ್ರಾಮರ್– 02 ಹುದ್ದೆಗಳು**
**ಹುದ್ದೆಗಳ ಸಂಖ್ಯೆ: ಉಳಿಕೆ ಮೂಲ ವೃಂದ 01 ಹುದ್ದೆ, ಕಲ್ಯಾಣ ಕರ್ನಾಟಕ 01 ಹುದ್ದೆ**

ವೇತನ ಶ್ರೇಣಿ: 52650-1250-53900-1450-62600-1650-72500-1900-83900-2200-97100.

**ಮೀಸಲಾತಿ ವರ್ಗೀಕರಣ (ಉಳಿಕೆ ಮೂಲ ವೃಂದ)–01 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಸಾಮಾನ್ಯ | 01 | – | – | – | – | – | – | – | 01 |
| | ಒಟ್ಟು | 01 | – | – | – | – | – | – | – | 01 |

**ಮೀಸಲಾತಿ ವರ್ಗೀಕರಣ(ಕಲ್ಯಾಣ-ಕರ್ನಾಟಕ)-01 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಸಾಮಾನ್ಯ | 01 | - | - | - | - | - | - | - | 01 |
| | ಒಟ್ಟು | 01 | - | - | - | - | - | - | - | 01 |

2. ಹುದ್ದೆಯ ಹೆಸರು: **ಜೂನಿಯರ್ ಪ್ರೋಗ್ರಾಮರ್-02 ಹುದ್ದೆಗಳು**
**ಹುದ್ದೆಗಳ ಸಂಖ್ಯೆ: ಉಳಿಕೆ ಮೂಲ ವೃಂದ 01 ಹುದ್ದೆ, ಕಲ್ಯಾಣ ಕರ್ನಾಟಕ 01 ಹುದ್ದೆ**

ವೇತನ ಶ್ರೇಣಿ: 43100-1100-46400-1250-53900-1450-62600-1650-72500-1900-83900.

**ಮೀಸಲಾತಿ ವರ್ಗೀಕರಣ (ಉಳಿಕೆ ಮೂಲ ವೃಂದ)-01 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಸಾಮಾನ್ಯ | 01 | | | - | - | - | - | - | 01 |
| | ಒಟ್ಟು | 01 | - | - | - | - | - | - | - | 01 |

**ಮೀಸಲಾತಿ ವರ್ಗೀಕರಣ(ಕಲ್ಯಾಣ-ಕರ್ನಾಟಕ)-01 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಸಾಮಾನ್ಯ | 01 | - | - | - | - | - | - | - | 01 |
| | ಒಟ್ಟು | 01 | - | - | - | - | - | - | - | 01 |

3. ಹುದ್ದೆಯ ಹೆಸರು: **ಜೂನಿಯರ್ ಕನ್ಸೋಲ್ ಆಪರೇಟರ್-04 ಹುದ್ದೆಗಳು**
**ಹುದ್ದೆಗಳ ಸಂಖ್ಯೆ: ಉಳಿಕೆ ಮೂಲ ವೃಂದ 03 ಹುದ್ದೆ, ಕಲ್ಯಾಣ ಕರ್ನಾಟಕ 01 ಹುದ್ದೆ**

ವೇತನ ಶ್ರೇಣಿ: 37900-950-39800-1100-46400-1250-53900-1450-62600-1650-70850.

**ಮೀಸಲಾತಿ ವರ್ಗೀಕರಣ (ಉಳಿಕೆ ಮೂಲ ವೃಂದ)-03 ಹುದ್ದೆಗಳು**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಪರಿಶಿಷ್ಟ ಜಾತಿ | 01 | - | - | - | - | - | - | - | 01 |
| 02 | ಸಾಮಾನ್ಯ | 01 | - | - | - | - | - | - | - | 01 |
| 03 | ಪರಿಶಿಷ್ಟ ಪಂಗಡ | 01 | - | - | - | - | - | - | - | 01 |
| | ಒಟ್ಟು | 03 | - | - | - | - | - | - | - | 03 |

**ಮೀಸಲಾತಿ ವರ್ಗೀಕರಣ(ಕಲ್ಯಾಣ-ಕರ್ನಾಟಕ)-01 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಸಾಮಾನ್ಯ | 01 | - | - | - | - | - | - | - | 01 |
| | ಒಟ್ಟು | 01 | - | - | - | - | - | - | - | 01 |

4. ಹುದ್ದೆಯ ಹೆಸರು: **ಕಂಪ್ಯೂಟರ್ ಆಪರೇಟರ್-04 ಹುದ್ದೆಗಳು**
**ಹುದ್ದೆಗಳ ಸಂಖ್ಯೆ: ಉಳಿಕೆ ಮೂಲ ವೃಂದ 03 ಹುದ್ದೆ, ಕಲ್ಯಾಣ ಕರ್ನಾಟಕ 01 ಹುದ್ದೆ**

ವೇತನ ಶ್ರೇಣಿ: 30350-750-32600-850-36000-950-39800-1100-46400-1250-53900-1450-58250.

**ಮೀಸಲಾತಿ ವರ್ಗೀಕರಣ (ಉಳಿಕೆ ಮೂಲ ವೃಂದ)-03 ಹುದ್ದೆಗಳು**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಪರಿಶಿಷ್ಟ ಜಾತಿ | 01 | - | - | - | - | - | - | - | 01 |
| 02 | ಸಾಮಾನ್ಯ | 01 | - | - | - | - | - | - | - | 01 |
| 03 | ಪರಿಶಿಷ್ಟ ಪಂಗಡ | 01 | - | - | - | - | - | - | - | 01 |
| | ಒಟ್ಟು | 03 | - | - | - | - | - | - | - | 03 |

**ಮೀಸಲಾತಿ ವರ್ಗೀಕರಣ(ಕಲ್ಯಾಣ-ಕರ್ನಾಟಕ)-01 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಸಾಮಾನ್ಯ | 01 | - | - | - | - | - | - | - | 01 |
| | ಒಟ್ಟು | 01 | - | - | - | - | - | - | - | 01 |

5. ಹುದ್ದೆಯ ಹೆಸರು: **ಸಹಾಯಕರು - 03 ಹುದ್ದೆಗಳು**
**ಹುದ್ದೆಗಳ ಸಂಖ್ಯೆ: ಉಳಿಕೆ ಮೂಲ ವೃಂದ 02 ಹುದ್ದೆ, ಕಲ್ಯಾಣ ಕರ್ನಾಟಕ 01 ಹುದ್ದೆ**

ವೇತನ ಶ್ರೇಣಿ: 30350-750-32600-850-36000-950-39800-1100-46400-1250-53900-1450-58250

**ಮೀಸಲಾತಿ ವರ್ಗೀಕರಣ (ಉಳಿಕೆ ಮೂಲ ವೃಂದ)-02 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಪರಿಶಿಷ್ಟ ಜಾತಿ | 01 | - | - | - | - | - | - | - | 01 |
| 02 | ಸಾಮಾನ್ಯ | 01 | | | - | - | - | - | - | 01 |
| | ಒಟ್ಟು | 02 | - | - | - | - | - | - | - | 02 |

**ಮೀಸಲಾತಿ ವರ್ಗೀಕರಣ(ಕಲ್ಯಾಣ-ಕರ್ನಾಟಕ)-01 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಪರಿಶಿಷ್ಟ ಜಾತಿ | 01 | - | - | - | - | - | - | - | 01 |
| | ಒಟ್ಟು | 01 | - | - | - | - | - | - | - | 01 |

6. ಹುದ್ದೆಯ ಹೆಸರು: **ಕಿರಿಯ ಸಹಾಯಕರು-08 ಹುದ್ದೆಗಳು**
ಹುದ್ದೆಗಳ ಸಂಖ್ಯೆ: **ಉಳಿಕೆ ಮೂಲ ವೃಂದ 07 ಹುದ್ದೆಗಳು, ಕಲ್ಯಾಣ-ಕರ್ನಾಟಕ 01 ಹುದ್ದೆ**
ವೇತನ ಶ್ರೇಣಿ: 21400-500-22400-550-24600-600-27000-650-29600-750-32600-850-36000-950-39800-1100-42000.

**ಮೀಸಲಾತಿ ವರ್ಗೀಕರಣ (ಉಳಿಕೆ ಮೂಲ ವೃಂದ)-07 ಹುದ್ದೆಗಳು**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಪರಿಶಿಷ್ಟ ಜಾತಿ | 01 | - | - | - | - | - | - | - | 01 |
| 02 | ಸಾಮಾನ್ಯ | 01 | 01 | 01 | - | - | - | - | - | 03 |
| 03 | ಪರಿಶಿಷ್ಟ ಪಂಗಡ | 01 | - | | | | | | | 01 |
| 04 | ಪ್ರವರ್ಗ-1 | 01 | - | - | - | - | - | - | - | 01 |
| 05 | ಪ್ರವರ್ಗ-2ಎ | 01 | - | - | - | - | - | - | - | 01 |
| | ಒಟ್ಟು | 05 | 01 | 01 | - | - | - | - | - | 07 |

**ಮೀಸಲಾತಿ ವರ್ಗೀಕರಣ(ಕಲ್ಯಾಣ-ಕರ್ನಾಟಕ)-01 ಹುದ್ದೆ**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಪರಿಶಿಷ್ಟ ಜಾತಿ | 01 | - | - | - | - | - | - | - | 01 |
| | ಒಟ್ಟು | 01 | - | - | - | - | - | - | - | 01 |

7. ಹುದ್ದೆಯ ಹೆಸರು: **ದತ್ತಾಂಶ ನಮೂದು ಸಹಾಯಕರು/ಬೆರಳಚ್ಚುಗಾರರು** (ಉಳಿಕೆ ಮೂಲ ವೃಂದ)
ಹುದ್ದೆಗಳ ಸಂಖ್ಯೆ: **05 ಹುದ್ದೆಗಳು**
ವೇತನ ಶ್ರೇಣಿ: 21400-500-22400-550-24600-600-27000-650-29600-750- 32600-850-36000-950-39800-1100-42000.

**ಮೀಸಲಾತಿ ವರ್ಗೀಕರಣ (ಉಳಿಕೆ ಮೂಲ ವೃಂದ)-05 ಹುದ್ದೆಗಳು**

| ಕ್ರ ಸಂ. | ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕರು | ಕನ್ನಡ ಮಾಧ್ಯಮ | ಯೋಜನಾ ಅಭ್ಯರ್ಥಿ | ಅಂಗವಿಕಲರು | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 01 | ಪರಿಶಿಷ್ಟ ಜಾತಿ | 01 | - | - | - | - | - | - | - | 01 |
| 02 | ಸಾಮಾನ್ಯ | 01 | 01 | | - | - | - | - | - | 02 |
| 03 | ಪರಿಶಿಷ್ಟ ಪಂಗಡ | 01 | - | | | | | | | 01 |
| 04 | ಪ್ರವರ್ಗ-1 | 01 | - | - | - | - | - | - | - | 01 |
| | ಒಟ್ಟು | 04 | 01 | - | - | - | - | - | | 05 |

- ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16 (4) ರನ್ವಯ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/01/ಸೆಹಿಮ:2022, ಬೆಂಗಳೂರು, ದಿನಾಂಕ:28.12.2022 ರ ಪ್ರಕಾರ ಮಾಡಲಾಗಿದೆ.
- ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಕಲ್ಪಿಸಿರುವ ವಿವಿಧ ಸಮತಳ ಮೀಸಲಾತಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/02/ಸೆಹಿಮ:2023, ಬೆಂಗಳೂರು, ದಿನಾಂಕ:08.03.2023 ರ ಪ್ರಕಾರ ಮಾಡಲಾಗಿದೆ.

| | |
|---|---|
| ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ | **24.03.2024** |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **23.04.2024** |
| ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ | **25.04.2024** |

೦1. **ವಿದ್ಯಾರ್ಹತೆ:**

| ಕ್ರ. ಸಂ. | ಹುದ್ದೆಯ ಹೆಸರು | **ವಿದ್ಯಾರ್ಹತೆ** |
|---|---|---|
| 1. | **ಸೀನಿಯರ್ ಪ್ರೋಗ್ರಾಮರ್** | 1.ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫಾರ್ಮೇಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ಪದವಿಯನ್ನು ಹೊಂದಿರಬೇಕು.<br>2.ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಅಥವಾ ಪ್ರೋಗ್ರಾಮಿಂಗ್ ಅಥವಾ ಸಾಫ್ಟ್‌ವೇರ್ ಮೈನ್‌ಟೆನನ್ಸ್ ಅಥವಾ ಡೇಟಾಬೇಸ್ ನಲ್ಲಿ 2 ವರ್ಷಕ್ಕಿಂತ ಕಡಿಮೆಯಿಲ್ಲದ ಅನುಭವ ಹೊಂದಿರಬೇಕು. |
| 2. | **ಜೂನಿಯರ್ ಪ್ರೋಗ್ರಾಮರ್** | 1.ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫಾರ್ಮೇಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ಪದವಿಯನ್ನು ಹೊಂದಿರಬೇಕು.<br>2.ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಅಥವಾ ಪ್ರೋಗ್ರಾಮಿಂಗ್ ಅಥವಾ ಸಾಫ್ಟ್‌ವೇರ್ ಮೈನ್‌ಟೇನನ್ಸ್ ಅಥವಾ ಡೇಟಾಬೇಸ್ ನಲ್ಲಿ 2 ವರ್ಷಕ್ಕಿಂತ ಕಡಿಮೆಯಿಲ್ಲದ ಅನುಭವ ಹೊಂದಿರಬೇಕು. |
| 3. | **ಜೂನಿಯರ್ ಕನ್ಸೋಲ್ ಆಪರೇಟರ್** | 1.ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫಾರ್ಮೇಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ಪದವಿಯನ್ನು ಹೊಂದಿರಬೇಕು.<br>2. ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಜ್ಞಾನವುಳ್ಳವರಾಗಿರಬೇಕು.<br>ಸಂಬಂಧಿತ ಕ್ಷೇತ್ರದಲ್ಲಿ ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ ಅನುಭವವನ್ನು ಹೊಂದಿರಬೇಕು. |
| 4. | **ಕಂಪ್ಯೂಟರ್ ಆಪರೇಟರ್** | 1.ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಅಪ್ಲಿಕೇಷನ್ (ಬಿ.ಸಿ.ಎ.) ಅಥವಾ ಕಂಪ್ಯೂಟರ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ಸ್‌ನಲ್ಲಿ ಬಿ.ಎಸ್‌ಸಿ., ಪದವಿಯನ್ನು ಹೊಂದಿರಬೇಕು.<br>2. ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫಾರ್ಮೇಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಜನಿಯರಿಂಗ್ ಪದವಿ ಪಡೆದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. |

| | | |
|---|---|---|
| 5. | **ಸಹಾಯಕರು** | ಕಾನೂನು ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಹೊಂದಿರಬೇಕು.<br>**ಕಡ್ಡಾಯವಾಗಿ ಗಣಕಯಂತ್ರದ ಜ್ಞಾನವನ್ನು ಹೊಂದಿರತಕ್ಕದ್ದು.** |
| 6. | **ಕಿರಿಯ ಸಹಾಯಕರು** | ಕಾನೂನು ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಹೊಂದಿರಬೇಕು.<br>**ಕಡ್ಡಾಯವಾಗಿ ಗಣಕಯಂತ್ರದ ಜ್ಞಾನವನ್ನು ಹೊಂದಿರತಕ್ಕದ್ದು.** |
| 7. | **ದತ್ತಾಂಶ ನಮೂದು ಸಹಾಯಕರು/ ಬೆರಳಚ್ಚುಗಾರರು** | ಎ) ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು.<br>ಬಿ) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್‌ಇಇಬಿ)ಯವರು ನಡೆಸುವ ಕನ್ನಡ ಮತ್ತು ಇಂಗ್ಲೀಷ್ ಹಿರಿಯ ದರ್ಜೆಯ ಬೆರಳಚ್ಚುಗಾರರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.<br>**ಕಡ್ಡಾಯವಾಗಿ ಗಣಕಯಂತ್ರದ ಜ್ಞಾನವನ್ನು ಹೊಂದಿರತಕ್ಕದ್ದು.** |

**ಪದವಿ (ಬ್ಯಾಚುಲರ್ ಡಿಗ್ರಿ) ಎಂದರೆ 10+2+ಪದವಿ ಮಾದರಿಯೊಂದಿಗೆ ಹಾಗೂ ಬ್ಯಾಚುಲರ್ ಆಫ್ ಲಾ ಎಂದರೆ 3 ಅಥವಾ 5 ವರ್ಷಗಳ ಪದವಿಯನ್ನು ಹೊಂದಿರತಕ್ಕದ್ದು. ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದುಕೊಂಡ ಪದವಿ ಅಥವಾ ಹೊಸ ಶಿಕ್ಷಣ ನೀತಿಯ ಪ್ರಕಾರ ಪಡೆದುಕೊಂಡ ತತ್ಸಮಾನ "ಪದವಿ".**

**ವಿಶೇಷ ಸೂಚನೆ:** ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಮೇಲಿನ ನಿಗದಿತ ಶೈಕ್ಷಣಿಕ ವಿದ್ಯಾರ್ಹತೆಯ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.

02. **ಶುಲ್ಕ:**

| | | |
|---|---|---|
| ಸಾಮಾನ್ಯ ಅರ್ಹತೆ ಮತ್ತು ಇತರೆ ಪ್ರವರ್ಗಗಳ ಅಭ್ಯರ್ಥಿಗಳಿಗೆ (ಪ್ರವರ್ಗ 2(ಎ), 2(ಬಿ), 3(ಎ), 3(ಬಿ)) | **ರೂ.750/-** | ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳು | **ರೂ.500/-** | |
| ವಿಕಲ ಚೇತನ ಅಭ್ಯರ್ಥಿಗಳು | **ರೂ.250/-** | |

**ಶುಲ್ಕ ಸಂದಾಯ: ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕವನ್ನು ಕಡ್ಡಾಯವಾಗಿ ವೆಬ್‌ಸೈಟ್ ಲಿಂಕ್** http://kea.kar.nic.in ಅಥವಾ https://cetonline.karnataka.gov.in/kea **ಮೂಲಕ ಸಂದಾಯ ಮಾಡತಕ್ಕದ್ದು.**

- ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮೊದಲು ಅಧಿಸೂಚನೆ, ಅರ್ಜಿ ಭರ್ತಿ ಮಾಡುವ ಕುರಿತ ಸೂಚನೆಗಳು, ಅರ್ಹತಾ ಷರತ್ತುಗಳನ್ನು ಓದಿಕೊಂಡು ಅದರಂತೆ ಭರ್ತಿ ಮಾಡತಕ್ಕದ್ದು.

- ಅರ್ಜಿಗಳನ್ನು Online ಮೂಲಕವೇ ಭರ್ತಿ ಮಾಡಿ, ಭಾವಚಿತ್ರ/ಸಹಿ ಅಪ್ಲೋಡ್ ಮಾಡಿದ ನಂತರ ಪರೀಕ್ಷಾ ಶುಲ್ಕವನ್ನು ಪಾವತಿಸದೇ ಹಾಗೂ ದಾಖಲೆಗಳನ್ನು ಭಾವಚಿತ್ರ/ಸಹಿಯನ್ನು ಅಪ್ಲೋಡ್ ಮಾಡದೇ ಇರುವ/ಅಸ್ಪಷ್ಟ ಭಾವಚಿತ್ರ/ಸಹಿಯನ್ನು ಅಪ್ಲೋಡ್ ಮಾಡಿರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿಗಳನ್ನು ಆನ್ ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. **ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಅವಕಾಶವಿರುವುದಿಲ್ಲ.**

- ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಚಾಲ್ತಿಯಲ್ಲಿರುವ ಇ-ಮೇಲ್ (e-mail) ವಿಳಾಸ/ಮೊಬೈಲ್ ಸಂಖ್ಯೆ ಕಡ್ಡಾಯವಾಗಿ ನಮೂದಿಸಲು ಸೂಚಿಸಿದೆ. ನೇಮಕಾತಿ ಪ್ರಕ್ರಿಯೆ ಮುಗಿಯುವವರೆವಿಗೂ ಇದೇ ಇ-ಮೇಲ್ (e-mail) ವಿಳಾಸ/ಮೊಬೈಲ್ ಸಂಖ್ಯೆಯನ್ನು ಸುಭದ್ರವಾಗಿಟ್ಟುಕೊಳ್ಳಬೇಕೆಂದು ತಿಳಿಸಲಾಗಿದೆ.

೦೩. **ವಯೋಮಿತಿ**: ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಕನಿಷ್ಠ 18 ವರ್ಷಗಳು ತುಂಬಿರತಕ್ಕದ್ದು ಹಾಗೂ ಈ ಕೆಳಕಂಡ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು:

| **ಅಭ್ಯರ್ಥಿಗಳು**: | **ಗರಿಷ್ಠ ವಯೋಮಿತಿ** |
|---|---|
| ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ | ೩೫ ವರ್ಷಗಳು |
| ಪ್ರವರ್ಗIIಎ, IIಬಿ, IIIಎ ಮತ್ತು IIIಬಿ ಅಭ್ಯರ್ಥಿಗಳಿಗೆ | ೩೮ ವರ್ಷಗಳು |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 ಅಭ್ಯರ್ಥಿಗಳಿಗೆ | ೪೦ ವರ್ಷಗಳು |

**ವಯೋಮಿತಿ ಸಡಿಲಿಕೆಗಳು**:

1. ಸಕ್ಷಮ ನೇಮಕಾತಿ ಪ್ರಾಧಿಕಾರ ಆದೇಶದ ರೀತ್ಯಾ ೨೦೨೦ರಲ್ಲಿ ದೇಶದಾದ್ಯಂತ ಹರಡಿದ ಕೋವಿಡ್ ಸಾಂಕ್ರಾಮಿಕ ಕಾಯಿಲೆ ಹಿನ್ನಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಸಾಧ್ಯವಾಗದ ಕಾರಣದಿಂದಾಗಿ ಮೇಲ್ಕಂಡ ಕೋಷ್ಠಕದಲ್ಲಿ ನಮೂದಿಸಿರುವ ಗರಿಷ್ಠ ವಯೋಮಿತಿಗೆ ೦೨ ವರ್ಷಗಳ ಸಡಿಲಿಕೆ ನೀಡಲಾಗಿದೆ. ವಯೋಮಿತಿ ಸಡಿಲಿಕೆಯು ಈ ಒಂದು ಬಾರಿಗೆ ಮಾತ್ರ ಸೀಮಿತವಾಗಿದೆ.
2. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 6(3)ರಲ್ಲಿ ತಿಳಿಸಲಾಗಿರುವ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ರಿಯಾಯಿತಿ ನೀಡಲಾಗುವುದು.

   - ಜನ್ಮ ದಿನಾಂಕವನ್ನು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿಯಲ್ಲಿರುವಂತೆ ಅರ್ಜಿಯಲ್ಲಿ ನಮೂದಿಸತಕ್ಕದ್ದು.

೦೪. **ಸೂಚನೆ**: ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿನ ಯಾವುದೇ ಮಾಹಿತಿಯನ್ನು ಯಾವುದೇ ಹಂತದಲ್ಲಿ ಬದಲಾವಣೆ/ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ ಅಭ್ಯರ್ಥಿಗಳು ಎಚ್ಚರಿಕೆಯಿಂದ ಅಧಿಸೂಚನೆಯನ್ನು ಓದಿ ಅರ್ಥೈಸಿಕೊಂಡು ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

೦೫. ಸರ್ಕಾರಿ ಇಲಾಖೆಗಳಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ತಮ್ಮ ನೇಮಕಾತಿ ಪ್ರಾಧಿಕಾರದ ಮೂಲಕ ಸೇವಾ ದೃಢೀಕರಣ ಪತ್ರವನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರಬೇಕು.

೦೬. ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಮತ್ತು ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, ೨೦೨೧ (ತಿದ್ದುಪಡಿಗಳು) ಹಾಗೂ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಹಾಗೂ ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು, ೨೦೧೩ (೨೦೨೧ರವರೆಗೆ ತಿದ್ದುಪಡಿಯಂತೆ)ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿ ಹುದ್ದೆಗಳಿಗೆ ನೇಮಕಾತಿ ಹೊಂದಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಮಾತ್ರ ನೇಮಕಾತಿಗೆ ಅರ್ಹರಾಗಿರುತ್ತಾರೆ.

೦೭. **ಅರ್ಹತಾ ಷರತ್ತುಗಳು**:-

(1) ಭಾರತೀಯ ನಾಗರೀಕನಾಗಿರತಕ್ಕದ್ದು.

(2) ನೇಮಕಾತಿ ಪ್ರಾಧಿಕಾರದಿಂದ ಆಯ್ಕೆಯಾದ ಯಾವುದೇ ಅಭ್ಯರ್ಥಿಯು ಆಯ್ಕೆಗೊಂಡ ಹುದ್ದೆಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಯೋಗ್ಯರೆನಿಸದ ಹೊರತು ಅಂತಹವರನ್ನು ಆ ಹುದ್ದೆಗೆ ನೇಮಿಸಲಾಗುವುದಿಲ್ಲ.

(3) ಕಾನೂನಿನ ಪ್ರಕಾರ ಒಬ್ಬ ಜೀವಂತ ಪತಿ/ಪತ್ನಿಗಿಂತ ಹೆಚ್ಚು ಮಂದಿ ಪತಿ/ಪತ್ನಿಯರನ್ನು ಹೊಂದಿರುವ ಪುರುಷ/ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗಿರುವುದಿಲ್ಲ.

೦೮. ಯಾವುದೇ ವ್ಯಕ್ತಿಯು ತನ್ನ ನೇಮಕಾತಿ ಬಗ್ಗೆ ಯಾವುದೇ ರೀತಿಯ ಒತ್ತಡ ತಂದಲ್ಲಿ ಅಂತಹ ಅಭ್ಯರ್ಥಿಗಳು ಸದರಿ ಹುದ್ದೆಯ ನೇಮಕಾತಿಗೆ ಅನರ್ಹರಾಗುತ್ತಾರೆ.

೦೯. **ಸ್ಪರ್ಧಾತ್ಮಕ ಪರೀಕ್ಷೆ:**

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರ (ತಿದ್ದುಪಡಿಗಳು) ಪ್ರಕಾರ ಎಲ್ಲಾ ಹುದ್ದೆಗಳಿಗೆ ನಡೆಸಲಾಗುವುದು, ನಿಯಮದ ಮಾಹಿತಿಯನ್ನು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ವೇಳಾ ಪಟ್ಟಿ ಮತ್ತು ಇತರೆ ವಿವರಗಳನ್ನು **ಕರ್ನಾಟಕ ಪರೀಕ್ಷಾ ಪ್ರಾಧಿಕಾರದ** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮ, ಪರೀಕ್ಷಾ ವಿಧಾನ ವಿವರಗಳನ್ನು **ಅನುಬಂಧ**-1 ರಲ್ಲಿ ವೀಕ್ಷಿಸಬಹುದಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು(ಆಡಳಿತಾತ್ಮಕ ಉದ್ದೇಶದಿಂದ ಜಿಲ್ಲಾ ಪರೀಕ್ಷಾ ಕೇಂದ್ರಗಳು ಬದಲಾವಣೆಯ ಷರತ್ತಿಗೆ ಒಳಪಟ್ಟಿರುತ್ತದೆ) ಅಭ್ಯರ್ಥಿಗಳಿಗೆ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಪ್ರಾಧಿಕಾರದ ವೆಬ್ ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಕಟಣೆಯ ಮೂಲಕ ತಿಳಿಸಲಾಗುವುದು ಹಾಗೂ ಈ ಬಗ್ಗೆ ಮಾಹಿತಿಯನ್ನು ಪ್ರಾಧಿಕಾರದ ವೆಬ್ ಸೈಟ್‌ನಲ್ಲಿಯೂ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಯಾವುದಾದರೊಂದು ಮೂಲ ಗುರುತಿನ ಚೀಟಿಯೊಂದಿಗೆ (ಪ್ಯಾನ್‌ಕಾರ್ಡ್/ ವಾಹನ ಚಾಲನಾ ಪರವಾನಗಿ /ಆಧಾರ್ ಕಾರ್ಡ್ /ಪಾಸ್‌ಪೋರ್ಟ್ /ವೋಟರ್ ಐಡಿ/ ಸರ್ಕಾರಿ ನೌಕರರ ಐಡಿ) ಪರೀಕ್ಷಾ ಕೇಂದ್ರಗಳಿಗೆ ಹೋಗಬೇಕು. ತಪ್ಪಿದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

10. **ಅರ್ಹರಾದ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆ ಸಂದರ್ಭದಲ್ಲಿ ಈ ಕೆಳಗೆ ತಿಳಿಸಲಾಗಿರುವ ಮೂಲ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು**.

(ಅ) ಹುಟ್ಟಿದ ತಾರೀಖಿನ ಆಧಾರದ ದಾಖಲೆ ಪ್ರತಿ.

(ಆ) ಹುದ್ದೆಗೆ ಸೂಚಿಸಲಾಗಿರುವ ವಿದ್ಯಾರ್ಹತೆಗಳಿಗೆ ಸಂಬಂಧಿಸಿದಂತೆ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳು.

(ಇ) ಜಾತಿ/ಪ್ರವರ್ಗ ದೃಢೀಕರಿಸುವ ಪ್ರಮಾಣ ಪತ್ರ. (ಸರ್ಕಾರದಿಂದ ನಿಗದಿಪಡಿಸಿರುವ ನಮೂನೆಯಲ್ಲಿ ಸಲ್ಲಿಸತಕ್ಕದ್ದು)

(ಈ) ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ಇತ್ತೀಚಿನ (06 ತಿಂಗಳೊಳಗಿನ) ನಡತೆ ಪ್ರಮಾಣ ಪತ್ರ ಹಾಗೂ ಅಭ್ಯರ್ಥಿಯು ಅಂತಿಮವಾಗಿ ವ್ಯಾಸಂಗ ಮಾಡಿದ ಶಿಕ್ಷಣ ಸಂಸ್ಥೆಯ ನಡತೆ ಪ್ರಮಾಣ ಪತ್ರ.

(ಉ) 1 ರಿಂದ 10ನೇ ತರಗತಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿದ್ದಕ್ಕಾಗಿ ಸಂಬಂಧಪಟ್ಟ ಶಿಕ್ಷಣಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.

(ಊ) ಕಲ್ಯಾಣ-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿನ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸುವವರು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ದೃಢೀಕರಣ ಪತ್ರ.

11. ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಅಧಿಕಾರಿ ಮತ್ತು ನೌಕರರುಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021ರ ರೀತ್ಯಾ ಸದರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯ ಕಾರ್ಯ ವಿಧಾನವನ್ನು ನಿಗದಿಪಡಿಸುವ ಸರ್ವೋಚ್ಛ ಅಧಿಕಾರ ಸನ್ಮಾನ್ಯ ಸಭಾಪತಿಯವರಿಗೆ ಇರುತ್ತದೆ.

12. ಆಯ್ಕೆಯಾಗಲಿರುವ ಅಭ್ಯರ್ಥಿಯ ನೇಮಕಾತಿಯು ಪೋಲೀಸ್ ಪರಿಶೀಲನೆ ದೃಢೀಕರಣ, ಸಿಂಧುತ್ವ (ಜಾತಿ) ಪ್ರಮಾಣ ಪತ್ರ ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದ ಅಂಕಪಟ್ಟಿಗಳ ನೈಜತೆಗೆ ಒಳಪಟ್ಟಿರುತ್ತದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



13. **ಪ್ರಮುಖ ವಿಶೇಷ ಸೂಚನೆಗಳು**:

- ಸಚಿವಾಲಯವು ಅಭ್ಯರ್ಥಿಗಳೊಂದಿಗೆ ಕಡ್ಡಾಯವಾಗಿ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ.
- ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಲಾದ ಮೀಸಲಾತಿ, ವಿದ್ಯಾರ್ಹತೆ ಹಾಗೂ ಇತರೆ ವಿವರಗಳ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಕೋರಿಕೆಗಳನ್ನು ತಿರಸ್ಕರಿಸಲಾಗುವುದು.
- ಅಪೂರ್ಣವಾಗಿರುವ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡದೇ ಇರುವ ಹಾಗೂ ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇರಿಸಿಕೊಳ್ಳತಕ್ಕದ್ದು. ಯಾವುದೇ ಕಾರಣಕ್ಕೂ ಸಚಿವಾಲಯದಿಂದ ಅರ್ಜಿಯ ನಕಲು ಪ್ರತಿಯನ್ನು ನೀಡಲಾಗುವುದಿಲ್ಲ.
- ಅರ್ಜಿ ಸಲ್ಲಿಸುವ ಮುನ್ನ ಅಭ್ಯರ್ಥಿಗಳು ಒದಗಿಸುವ ಮಾಹಿತಿಯು ಸರಿಯಾಗಿದೆ ಎಂದು ಸ್ವಯಂ ಖಚಿತಪಡಿಸಿಕೊಳ್ಳತಕ್ಕದ್ದು.
- ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾದಲ್ಲಿ ತಮ್ಮ ಅರ್ಜಿಯಲ್ಲಿ ಕೋರಿರುವ ಮೀಸಲಾತಿ ಪ್ರಮಾಣ ಪತ್ರಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ತಿರಸ್ಕರಿಸಲಾಗುವುದು. ಆದುದರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ನಿಗದಿತ ನಮೂನೆಯಲ್ಲಿ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು (ಮೀಸಲಾತಿ ಕೋರಿದ್ದಲ್ಲಿ) ಪಡೆದಿಟ್ಟುಕೊಂಡಿರತಕ್ಕದ್ದು,
- ದತ್ತಾಂಶ ನಮೂದು ಸಹಾಯಕರು/ಬೆರಳಚ್ಚುಗಾರರ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಕನ್ನಡ (ನುಡಿ-6.0 ತಂತ್ರಾಂಶ) ಮತ್ತು ಆಂಗ್ಲ ಭಾಷೆಯಲ್ಲಿ ಬೆರಳಚ್ಚು ಪರೀಕ್ಷೆಯನ್ನು ಗಣಕಯಂತ್ರದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವತಿಯಿಂದ ನಡೆಸಲಾಗುವುದು.

14. **ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಸಹಾಯವಾಣಿ ಸಂಖ್ಯೆ ಹಾಗೂ ಅಗತ್ಯವಿರುವ ಇತ್ಯಾದಿ ಮಾಹಿತಿ** – **080-23460460.**

15. **ದುರ್ನಡತೆ**:-

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವರೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವರೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವರೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವರೆಂದು ಅಥವಾ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವರೆಂದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

ಮಾನ್ಯ ಸಭಾಪತಿಯವರ ಆದೇಶಾನುಸಾರ
ಸಹಿ/-
(ಕೆ.ಆರ್. ಮಹಾಲಕ್ಷ್ಮಿ)
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH

# ಅನುಬಂಧ - 1

**ಸ್ಪರ್ಧಾತ್ಮಕ ಪರೀಕ್ಷೆ.-** ಗ್ರೂಪ್-ಎ ಮತ್ತು ಗ್ರೂ -ಬಿ ಹುದ್ದೆಗಳಿಗೆ ಸಂಬಂಧಿಸಿದಂತೆ, ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸುವುದಕ್ಕೆ ನಿರ್ಧರಿಸಿದ್ದಲ್ಲಿ, ಆಯ್ಕೆ ಪ್ರಾಧಿಕಾರವು ಈ ಕೆಳಕಂಡ ರೀತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸತಕ್ಕದ್ದು, ಎಂದರೆ:-

(ಎ) ಪರೀಕ್ಷೆಯು ತಲಾ 200 ಅಂಕಗಳ ಎರಡು ಲಿಖಿತ ಪ್ರಶ್ನೆ ಪತ್ರಿಕೆಗಳನ್ನು ಒಳಗೊಂಡಿದ್ದು ವಸ್ತುನಿಷ್ಠ ಬಹು ಆಯ್ಕೆ ಮಾದರಿಯಲ್ಲಿ ಇರತಕ್ಕದ್ದು, ಪ್ರತಿಯೊಂದು ಪ್ರಶ್ನೆಯು ಋಣಾತ್ಮಕ ಅಂಕದ ಸ್ವರೂಪದ್ದಾಗಿರತಕ್ಕದ್ದು ಮತ್ತು ಅಂಥ ಪ್ರಶ್ನೆಗಳಿಗೆ ಹಂಚಿಕೆ ಮಾಡಲಾದ ಅಂಕಗಳಲ್ಲಿ ನಾಲ್ಕನೇ ಒಂದು ಭಾಗದಷ್ಟು (1/4) ಅಂಕಗಳನ್ನು ಪ್ರತಿಯೊಂದು ತಪ್ಪಾದ ಉತ್ತರಕ್ಕೆ ಕಡಿತಗೊಳಿಸತಕ್ಕದ್ದು.

**(i) ಪತ್ರಿಕೆ-1** ಸಾಮಾನ್ಯ ಪತ್ರಿಕೆ:- ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ವಿಜ್ಞಾನ, ಕರ್ನಾಟಕ ಇತಿಹಾಸ ಮತ್ತು ಭೂಗೋಳ ಶಾಸ್ತ್ರ, ಭಾರತದ ಇತಿಹಾಸ, ಭಾರತದ ಭೂಗೋಳ ಶಾಸ್ತ್ರ, ಸಮಾಜ ವಿಜ್ಞಾನ, ಸಾಮಾನ್ಯ ಬೌದ್ಧಿಕ ಸಾಮರ್ಥ್ಯಕ್ಕೆ ಸಂಬಂಧಿಸಿದ ಸಾಮಾನ್ಯ ಜ್ಞಾನದ ವಿಷಯಗಳನ್ನು, ದೈನಂದಿನ ಗ್ರಹಿಕೆಯ ವಿಷಯಗಳನ್ನು ಮತ್ತು ನಿಗದಿಪಡಿಸಲಾದ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ವ್ಯಕ್ತಿಯಿಂದ ನಿರೀಕ್ಷಿಸಬಹುದಾದ ಪ್ರಾಯೋಗಿಕ ಜ್ಞಾನವನ್ನು ಒಳಗೊಂಡಿರಬೇಕು.

**(ii) ಪತ್ರಿಕೆ II.-** ನಿರ್ದಿಷ್ಟ ಪತ್ರಿಕೆ:- ಈ ಪತ್ರಿಕೆ ವಿಷಯವನ್ನು ಆಯ್ಕೆ ಪ್ರಾಧಿಕಾರವು ಯಾವ ಉದ್ಯೋಗಕ್ಕಾಗಿ ಆಯ್ಕೆಯನ್ನು ಮಾಡಲಾಗುತ್ತಿದೆಯೋ ಅದರ ಸ್ವರೂಪವನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ಸಂಬಂಧಪಟ್ಟ ಕ್ಷೇತ್ರ ಇಲಾಖೆ ಅಥವಾ ನೇಮಕಾತಿ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಅರ್ಹತಾ ಪರೀಕ್ಷೆಯನ್ನು ನಿರ್ಧರಿಸತಕ್ಕದ್ದು.

(ಬಿ) ಈ ಪ್ರಶ್ನೆ ಪತ್ರಿಕೆಗಳನ್ನು ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಸಿದ್ಧಪಡಿಸತಕ್ಕದ್ದು.

(ಸಿ) ಅಭ್ಯರ್ಥಿಗಳ ಪಟ್ಟಿಯನ್ನು ರಾಜ್ಯದ ಮೀಸಲಾತಿ ನೀತಿಗೆ ಒಳಪಟ್ಟು ಮೇಲ್ಕಂಡ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಒಟ್ಟು ಅಂಕಗಳ ಶೇಕಡಾವಾರು ಪ್ರಮಾಣದ ಆಧಾರದ ಮೇಲೆ ನಿರ್ಧರಿಸಲಾದ ಅರ್ಹತಾ ಕ್ರಮದಲ್ಲಿ ಸಿದ್ಧಪಡಿಸತಕ್ಕದ್ದು.

ಪರಂತು, ಅಭ್ಯರ್ಥಿಯು ಅರ್ಹತೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಒಟ್ಟು ಅಂಕಗಳಲ್ಲಿ ಕನಿಷ್ಠ ಪಕ್ಷ ಶೇಕಡಾ ಮೂವತ್ತೈದರಷ್ಟು ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರತಕ್ಕದ್ದು.

ಪರಂತು, ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಮಾನವಾದ ಅಂಕಗಳನ್ನು ಗಳಿಸಿದ್ದರೆ, ಅಂತಹ ಅಭ್ಯರ್ಥಿಗಳ ಅರ್ಹತಾ ಕ್ರಮವನ್ನು ಅವರುಗಳ

ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸತಕ್ಕದ್ದು, ವಯಸ್ಸಿನಲ್ಲಿ ಹಿರಿಯವನಾದ ವ್ಯಕ್ತಿಯ ಅರ್ಹತಾ ಕ್ರಮದಲ್ಲಿ ಮೇಲಿನ ಸ್ಥಾನದಲ್ಲಿರಬೇಕು.

(2) ಗ್ರೂಪ್-ಸಿ ಹುದ್ದೆಗಳಿಗೆ ಸಂಬಂಧಿಸಿದಂತೆ:-

(ಎ) ಪದವಿಯ ವಿದ್ಯಾರ್ಹತೆಗಳು ಅಗತ್ಯವಿರುವ ಗ್ರೂಪ್-ಸಿ ಹುದ್ದೆಗಳಿಗೆ ನಡೆಸುವ ಪರೀಕ್ಷೆಯು ಎರಡು ಪತ್ರಿಕೆಗಳನ್ನು ಒಳಗೊಂಡಿರತಕ್ಕದ್ದು, ಪ್ರತಿಯೊಂದು ಪತ್ರಿಕೆಯು 100 ಅಂಕಗಳನ್ನು ಒಳಗೊಂಡಿದ್ದು, ಒಟ್ಟು 200 ಅಂಕಗಳದ್ದಾಗಿರಬೇಕು. ಈ ಎರಡು ಪತ್ರಿಕೆಗಳು ಕಡ್ಡಾಯವಾಗಿರುತ್ತವೆ. ಪತ್ರಿಕೆ 1 ರ ಪಠ್ಯಕ್ರಮವು ಈ ಕೆಳಗೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು. ಪತ್ರಿಕೆ 2 ಅನ್ನು ಈ ಕೆಳಗೆ ನಿರ್ದಿಷ್ಟಪಡಿಸಲಾದಂತೆ ಮೂರು ಭಾಗಗಳಾಗಿ ವಿಭಾಗಿಸಬೇಕು. ಈ ಎರಡೂ ಪತ್ರಿಕೆಗಳು, ನಕಾರಾತ್ಮಕ ಸ್ವರೂಪದ ಅಂಕಗಳನ್ನು ಒಳಗೊಂಡಿದ್ದು. ಸದರಿ ಪ್ರಶ್ನೆಗಳಿಗೆ ಹಂಚಿಕೆ ಮಾಡಲಾದ ಅಂಕಗಳ ನಾಲ್ಕನೇ ಒಂದು ಭಾಗದಷ್ಟು(1/4) ಅಂಕಗಳನ್ನು ಪ್ರತಿಯೊಂದು ತಪ್ಪಾದ ಉತ್ತರಕ್ಕೆ ಕಡಿತಗೊಳಿಸತಕ್ಕದ್ದು.

**ಪತ್ರಿಕೆ-1 ಸಾಮಾನ್ಯ ಜ್ಞಾನ**

**(ಗರಿಷ್ಠ ಅಂಕಗಳು-100)**

(ಎ) ಪ್ರಚಲಿತ ಘಟನೆಗಳಿಗೆ ಸಂಬಂಧಿಸಿದ ವಿಷಯಗಳ ಸಾಮಾನ್ಯ ಜ್ಞಾನ.
(ಬಿ) ಸಾಮಾನ್ಯ ವಿಜ್ಞಾನ ವಿಷಯಗಳು.
(ಸಿ) ಭೂಗೋಳ ಶಾಸ್ತ್ರ ವಿಷಯಗಳು.
(ಡಿ) ಸಮಾಜ ವಿಜ್ಞಾನ ವಿಷಯಗಳು.
(ಇ) ಭಾರತೀಯ ಸಮಾಜ ಮತ್ತು ಅದರ ಬೆಳವಣಿಗೆಗಳ ಇತಿಹಾಸದ ವಿಷಯಗಳು.
(ಎಫ್) ಭಾರತದ ಮತ್ತು ಕರ್ನಾಟಕದ ಇತಿಹಾಸ.
(ಜಿ) ಭಾರತದ ಸಂವಿಧಾನದ ಮತ್ತು ಸಾರ್ವಜನಿಕ ಆಡಳಿತ
(ಎಚ್) ಪ್ರಾಯೋಗಿಕ ಜ್ಞಾನ ಮತ್ತು ಬೌದ್ಧಿಕ ಸಾಮರ್ಥ್ಯದ ವಿಷಯಗಳು. (ಎಸ್ ಎಸ್ ಎಲ್ ಸಿ ಮಟ್ಟದ)
(ಐ) ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸದ ವಿಷಯಗಳು.
(ಜೆ) ಸ್ವಾತಂತ್ರ್ಯ ನಂತರದಲ್ಲಿ ಕರ್ನಾಟಕದ ಭೂ ಸುಧಾರಣೆಗಳು ಮತ್ತು ಸಾಮಾಜಿಕ ಬದಲಾವಣೆಗಳ ವಿಷಯಗಳು.
(ಕೆ) ಕರ್ನಾಟಕದ ಅರ್ಥವ್ಯವಸ್ಥೆ: ಅದರ ಸಾಮರ್ಥ್ಯ ಮತ್ತು ದೌರ್ಬಲ್ಯತೆ: ಪ್ರಸ್ತುತ ಸ್ಥಿತಿಗತಿ ಕುರಿತ ವಿಷಯಗಳು.
(ಎಲ್) ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಗ್ರಾಮೀಣ ಸಹಕಾರ ಸಂಸ್ಥೆಗಳ ವಿಷಯಗಳು.
(ಎಂ) ಕರ್ನಾಟಕ ಪರಿಣಾಮಕಾರಿ ಆಡಳಿತಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ ಕುರಿತ ವಿಷಯಗಳು.
(ಎನ್) ಕರ್ನಾಟಕದ ಪರಿಸರ ಸಂಬಂಧಿ ಸಮಸ್ಯೆಗಳು ಮತ್ತು ಅಭಿವೃದ್ಧಿ ಕುರಿತ ವಿಷಯಗಳು.
(ಒ) ಬೌದ್ಧಿಕ ಸಾಮರ್ಥ್ಯದ ವಿಷಯಗಳು.

**(ii) ಪತ್ರಿಕೆ-II** **(ಗರಿಷ್ಠ ಅಂಕಗಳು-100)**

(ಎ) ಸಾಮಾನ್ಯ ಕನ್ನಡ (ಗರಿಷ್ಠ ಅಂಕಗಳು-35)
(ಬಿ) ಸಾಮಾನ್ಯ ಇಂಗ್ಲಿಷ್ (ಗರಿಷ್ಠ ಅಂಕಗಳು-35)
(ಸಿ) ಕಂಪ್ಯೂಟರ್ ಜ್ಞಾನ (ಗರಿಷ್ಠ ಅಂಕಗಳು-30)

(ಬಿ) ಡಿಪ್ಲೊಮಾ, ಪಿಯುಸಿ , ಎಸ್‌ಎಸ್‌ಎಲ್‌ಸಿ ಮತ್ತು ತತ್ಸಮಾನ ವಿದ್ಯಾರ್ಹತೆ ಅಥವಾ ಪದವಿ ದರ್ಜೆಗಿಂತ ಕಡಿಮೆ ಇರುವ ಇನ್ನಾವುದೇ ವಿದ್ಯಾರ್ಹತೆಗಳು ಅಗತ್ಯವಿರುವ ಹುದ್ದೆಗಳಿಗಾಗಿ ಪರೀಕ್ಷೆಯು ಎರಡು ಪತ್ರಿಕೆಗಳನ್ನು ಒಳಗೊಂಡಿರತಕ್ಕದ್ದು, ಪ್ರತಿಯೊಂದು ಪತ್ರಿಕೆಯು 100 ಅಂಕಗಳನ್ನು ಒಳಗೊಂಡಿದ್ದು, ಮತ್ತು ಒಟ್ಟು 200 ಅಂಕಗಳನ್ನು ಹೊಂದಿರತಕ್ಕದ್ದು. ಈ ಎರಡು ಪತ್ರಿಕೆಗಳು ಕಡ್ಡಾಯವಾದವುಗಳಾಗಿರಬೇಕು. ಪತ್ರಿಕೆ 1ರ ಪಠ್ಯಕ್ರಮವು ಈ ಕೆಳಗೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು. ಪತ್ರಿಕೆ 2 ಅನ್ನು ಈ ಕೆಳಗೆ ನಿರ್ದಿಷ್ಟ ಪಡಿಸಿದಂತೆ ಮೂರು ಭಾಗಗಳಾಗಿ ವಿಭಾಗಿಸಬೇಕು. ಈ ಎರಡೂ ಪತ್ರಿಕೆಗಳು ನಕಾರಾತ್ಮಕ ಸ್ವರೂಪದ ಅಂಕಗಳನ್ನು ಒಳಗೊಂಡಿರತಕ್ಕದ್ದು ಮತ್ತು ಸದರಿ ಪ್ರಶ್ನೆಗಳಿಗೆ ಹಂಚಿಕೆ ಮಾಡಲಾದ ಅಂಕಗಳ ನಾಲ್ಕನೇ ಒಂದು ಭಾಗದಷ್ಟು (1/4) ಅಂಕಗಳನ್ನು ಪ್ರತಿಯೊಂದು ತಪ್ಪಾದ ಉತ್ತರಕ್ಕಾಗಿ ಕಡಿತಗೊಳಿಸತಕ್ಕದ್ದು.

**ಪತ್ರಿಕೆ-1 ಸಾಮಾನ್ಯ ಜ್ಞಾನ** **(ಗರಿಷ್ಠ ಅಂಕಗಳು-100)**

(ಎ) ಪ್ರಚಲಿತ ಘಟನೆಗಳಿಗೆ ಸಂಬಂಧಿಸಿದ ಸಾಮಾನ್ಯ ಜ್ಞಾನದ ವಿಷಯಗಳು.

(ಬಿ) ದೈನಂದಿನ ಗ್ರಹಿಕೆಯ ವಿಷಯಗಳು.

(ಸಿ) ಭಾರತದ ಸಂವಿಧಾನದ ಸ್ಥೂಲ ನೋಟದ ವಿಷಯಗಳು.

(ಡಿ) ವಿಶೇಷವಾಗಿ ಕರ್ನಾಟಕಕ್ಕೆ ಸಂಬಂಧಿಸಿದ ಭಾರತದ ಇತಿಹಾಸ.

(ಇ) ಕರ್ನಾಟಕಕ್ಕೆ ಸಂಬಂಧಿಸಿದಂತೆ ಭಾರತದ ಭೂಗೋಳ ವಿಷಯಗಳು.

(ಎಫ್) ರಾಜ್ಯ ಮತ್ತು ಪ್ರಾದೇಶಿಕ ಆಡಳಿತ ಕುರಿತ ವಿಷಯಗಳು.

(ಜಿ) ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ಗ್ರಾಮೀಣ ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದ ಉಪಕ್ರಮಗಳನ್ನು ಒಳಗೊಂಡಂತೆ ಕರ್ನಾಟಕದ ಆರ್ಥಿಕತೆಯ ಅಭಿವೃದ್ಧಿ ಕುರಿತ ವಿಷಯಗಳು.

(ಎಚ್) ಕರ್ನಾಟಕದ ಪರಿಸರ ಸಂಬಂಧಿ ಸಮಸ್ಯೆಗಳು ಮತ್ತು ಅಭಿವೃದ್ಧಿ ಕುರಿತ ವಿಷಯಗಳು.

| **ಪತ್ರಿಕೆ- II** | **(ಗರಿಷ್ಠ ಅಂಕಗಳು-100)** |
|---|---|
| (ಎ) ಸಾಮಾನ್ಯ ಕನ್ನಡ | (ಗರಿಷ್ಠ ಅಂಕಗಳು-35) |
| (ಬಿ) ಸಾಮಾನ್ಯ ಇಂಗ್ಲೀಷ್ | (ಗರಿಷ್ಠ ಅಂಕಗಳು -35) |
| (ಸಿ) ಕಂಪ್ಯೂಟರ್ ಜ್ಞಾನ | (ಗರಿಷ್ಠ ಅಂಕಗಳು-30) |

(ಸಿ) ಅಭ್ಯರ್ಥಿಗಳ ಪಟ್ಟಿಯನ್ನು ರಾಜ್ಯದ ಮೀಸಲಾತಿ ನೀತಿಗೆ ಒಳಪಟ್ಟು ಮೇಲ್ಕಂಡ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಒಟ್ಟು ಅಂಕಗಳ ಶೇಕಡಾವಾರು ಪ್ರಮಾಣದ ಆಧಾರದ ಮೇಲೆ ನಿರ್ಧರಿಸಲಾದ ಅರ್ಹತೆಯ ಕ್ರಮದಲ್ಲಿ ಸಿದ್ಧಪಡಿಸತಕ್ಕದ್ದು.

ಪರಂತು, ಅಭ್ಯರ್ಥಿಯು, ಅರ್ಹತೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಒಟ್ಟು ಅಂಕಗಳಲ್ಲಿ ಕನಿಷ್ಠ ಪಕ್ಷ ಶೇಕಡಾ ಮೂವತ್ತೈದರಷ್ಟು ಅಂಕಗಳನ್ನು ಕಡ್ಡಾಯವಾಗಿ ಗಳಿಸಬೇಕು.

ಪರಂತು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಸಮಾನವಾದ ಅಂಕಗಳನ್ನು ಗಳಿಸಿದ್ದರೆ, ಅಂತಹ ಅಭ್ಯರ್ಥಿಗಳ ಅರ್ಹತೆಯ ಕ್ರಮವನ್ನು ಅವರುಗಳ ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸತಕ್ಕದ್ದು, ವಯಸ್ಸಿನಲ್ಲಿ ಹಿರಿಯವನಾದ ವ್ಯಕ್ತಿಯು ಅರ್ಹತಾ ಕ್ರಮದಲ್ಲಿ ಮೇಲಿನ ಸ್ಥಾನದಲ್ಲಿರಬೇಕು.

**7. ಕನ್ನಡ ಭಾಷಾ ಪರೀಕ್ಷೆ.-** ಮೇಲ್ಕಂಡ ನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ಅಭ್ಯರ್ಥಿಗಳು ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹತೆಯನ್ನು ಪಡೆದ ಹೊರತು, ಆಯ್ಕೆಗೆ ಅರ್ಹರಾಗತಕ್ಕದ್ದಲ್ಲ. ಈ ಪರೀಕ್ಷೆಯು ಗರಿಷ್ಠ 150 ಅಂಕಗಳ ಒಂದು ಪ್ರಶ್ನೆ ಪತ್ರಿಕೆಯನ್ನು

ಒಳಗೊಂಡಿರತಕ್ಕದ್ದು. ಅಭ್ಯರ್ಥಿಯು ಈ ಪತ್ರಿಕೆಯಲ್ಲಿ ಅರ್ಹತೆ ಹೊಂದಲು ಕನಿಷ್ಠ 50 ಅಂಕಗಳನ್ನು ಗಳಿಸಬೇಕು. ಈ ಪ್ರಶ್ನೆ ಪತ್ರಿಕೆಯನ್ನು ಎಸ್‌ಎಸ್‌ಎಲ್‌ಸಿ ಹಂತದಲ್ಲಿನ ಪ್ರಥಮ ಭಾಷೆ ಕನ್ನಡವನ್ನು ಮಾನದಂಡವನ್ನಾಗಿಟ್ಟುಕೊಂಡು ಸಿದ್ಧಪಡಿಸತಕ್ಕದ್ದು.